**ಅಸಲು ದಾವಾ ಸಂಖ್ಯೆ: 138/2018**

**ಪಿ.ಡಬ್ಲ್ಯೂ – 2**

**ಸಾಕ್ಷಿಯನ್ನು ದಿಃ 17.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಟಿ.ಬಿ.ಎಂ. ವಕೀಲರಿಂದ**

1. ನಾನು ಬಿ ಜೆ ಪಿ ಪಕ್ಷದಿಂದ ಪಂಚಾಯಿತಿ ಸದಸ್ಯಳಾಗಿ ಆಯ್ಕೆಯಾಗಿದ್ದೆ. ಕಳೆದ ಬಾರಿಯ ಚುನಾವಣೆಯಲ್ಲಿ ನಾನು ಸೋತಿರುತ್ತೇನೆ. ಬಿ ಜೆ ಪಿ ಪಕ್ಷಕ್ಕೆ ಮೇಘರಾಜ್ ರವರು ಶಿವಮೊಗ್ಗದ ಜಿಲ್ಲಾಧ್ಯಕ್ಷರಾಗಿರುತ್ತಾರೆ ಎಂದರೆ ಸರಿ. ಮೇಘರಾಜ್ ರವರು 8 ನೇ ವಾದಿಯ ಸಹೋದರ ಎಂದರೆ ಸರಿ. ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ತುಮರಿ ಕೊಪ್ಪ ಗ್ರಾಮದ ಸರ್ವೆ ಸಂಖ್ಯೆ 10 ರ ಒಟ್ಟಾರೆ ವಿಸ್ತೀರ್ಣ ನೂರಾರು ಎಕರೆ ಇರುತ್ತದೆ. ತುಮರಿ ಕೊಪ್ಪದ ಸರ್ವೆ ಸಂಖ್ಯೆ 10 ರಲ್ಲಿ 8 ನೇ ವಾದಿಯ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಲ್ಲಿ ಸಾಕಷ್ಟು ಜನರ ಮನೆಗಳಿರುತ್ತವೆ ಎಂದು ನುಡಿಯುತ್ತಾರೆ. 8 ನೇ ವಾದಿಯ ಮನೆ ಸರ್ವೆ ಸಂಖ್ಯೆ 10 ರಲ್ಲಿ ಸುಮಾರು 1 ಎಕರೆ ಪ್ರದೇಶದಲ್ಲಿ ಇರಬಹುದು ಎಂದರೆ ಸಾಕ್ಷಿಯು ಇರಬಹುದು ಅದರ ಅಳತೆ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ.

2. ಸರ್ವೆ ಸಂಖ್ಯೆ 10 ರಲ್ಲಿ 2 ಎಕರೆ ಜಾಗವನ್ನು ಆಟದ ಮೈದಾನ, ಒಕ್ಕಲ ಕಣ, ಆಸ್ಪತ್ರೆ, ಅಂಗನವಾಡಿಗೆ ನೀಡಬೇಕೆಂದು ನಾವು 2016 ರಲ್ಲಿ ತೀರ್ಮಾನವನ್ನು ಮಾಡಿದ್ದೆವು. ಆ ಸಮಯದಲ್ಲಿ 8 ನೇ ವಾದಿಯೇ ಪಂಚಾಯಿತಿಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. ತುಮರಿಕೊಪ್ಪ ಗ್ರಾಮದಲ್ಲಿ 7 ಮನೆಗಳು ಮಾತ್ರ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 20 ರಿಂದ 30 ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಸರ್ವೆ ಸಂಖ್ಯೆ 10 ರಲ್ಲಿ ಆಟದ ಮೈದಾನ, ಒಕ್ಕಲ ಕಣ, ಆಸ್ಪತ್ರೆ, ಅಂಗನವಾಡಿಗೆ ನೀಡಬೇಕೆಂದು ನಾವು 2016 ರಲ್ಲಿ ತೀರ್ಮಾನ ಮಾಡಿದ 2 ಎಕರೆ ಪ್ರದೇಶದ ಚೆಕ್ಕುಬಂಧಿ ನನಗೆ ಗೊತ್ತಿಲ್ಲ.

3. 8 ನೇ ವಾದಿಯ ಮನೆ ಆದ ನಂತರ ರಸ್ತೆ ಬರುತ್ತದೆ, ಅದರ ನಂತರ ಸದರಿ 2 ಎಕರೆ ಪ್ರದೇಶ ಬರುತ್ತದೆ. ಸದರಿ 2 ಎಕರೆ ಪ್ರದೇಶವು ಪ್ರತಿವಾದಿಯರು ಮನೆ ಕಟ್ಟಿಕೊಂಡು ಕಣ ಮಾಡಿಕೊಂಡು ಗೇರು ಸಸಿಗಳನ್ನು ನೆಟ್ಟು ಪ್ರತಿವಾದಿಯರು ಬೆಳೆಸಿರುವ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ದಿನಪತ್ರಿಕೆಯಲ್ಲಿ ತುಮರಿಕೊಪ್ಪ ಗ್ರಾಮದ ಸರ್ವೆ ಸಂಖ್ಯೆ 10 ರ ಕುರಿತು ಇರುವ ಪತ್ರಿಕಾ ಪ್ರಕಟಣೆ ಎಂದರೆ ಸರಿ.

ಸಾಕ್ಷಿಯು ವಿಜಯವಾಣಿ ದಿನಪತ್ರಿಕೆಯ ಪತ್ರಿಕಾ ಪ್ರಕಟಣೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 17 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಛಾಯಾಚಿತ್ರವು ನಾಗರಾಜ್ ರವರು ಹಿಟಾಚಿಯಿಂದ ಕೆಲಸ ಮಾಡಿಸುತ್ತಿರುವ ಛಾಯಾಚಿತ್ರ ಎಂದರೆ ಸರಿಯಲ್ಲ. 8 ನೇ ವಾದಿಯು ತುಮರಿ ಕೊಪ್ಪ ಗ್ರಾಮದ ಸರ್ವೇ ಸಂಖ್ಯೆ 10 ರ 60 ಎಕರೆ ಜಾಗವನ್ನು ಕಬಳಿಸಿರುತ್ತಾರೆಂದು ಪತ್ರಿಕೆಯಲ್ಲಿ ವರದಿ ಬಂದಿರುತ್ತದೆ ಎಂದರೆ ಸರಿ.

4. 2016 ರಿಂದ 2021 ರವರೆಗೂ ನಾನು ಮತ್ತು 8 ನೇ ವಾದಿ ಒಂದೇ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ಆ ಸಮಯದಲ್ಲಿ 8 ನೇ ವಾದಿ ಪಂಚಾಯಿತಿಯ ಅಧ್ಯಕ್ಷರಾಗಿದ್ದರು, ನಾನು ಸದಸ್ಯಳಾಗಿದ್ದೆ ಎಂದರೆ ಸರಿ. 8 ನೇ ವಾದಿ ಕಬಳಿಸಿರುವ 60 ಎಕರೆಯಲ್ಲಿ ನನಗೂ ಸಹ ಪಾಲಿದೆ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 10 ಇರುವಕ್ಕಿಯವರೆಗೂ ವ್ಯಾಪಿಸಿದೆ ಎಂದರೆ ಸರಿ. ಸರ್ವೇ ಸಂಖ್ಯೆ 10 ರ ಸ್ವತ್ತಿನಲ್ಲಿ ಇರುವಕ್ಕಿಯವರೆಗೆ ವ್ಯಾಪಿಸಿರುವ 5 ಎಕರೆ ಸ್ವತ್ತಿಗೆ ನಾನು ಬೇಲಿಯನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 8 ನೇ ವಾದಿ ಸರ್ವೇ ಸಂಖ್ಯೆ 10 ರಲ್ಲಿ ಕೆರೆಯನ್ನು ಸೇರಿಸಿ ಬೇಲಿಯನ್ನು ಹಾಕಿರುವುದರಿಂದ ದನ-ಕರುಗಳಿಗೆ ಆಹಾರ ಮತ್ತು ನೀರಿನ ಸಮಸ್ಯೆ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

5. ಇರುವಕ್ಕಿ, ದಂಟಿನಕೊಪ್ಪ, ಸರಗುಂದ ಗ್ರಾಮಗಳು ನೂರಾರು ಮನೆಗಳು ಇರುವ ಗ್ರಾಮಗಳು ಎಂದರೆ ಸರಿ. ತುಮರಿ ಕೊಪ್ಪ ದಲ್ಲಿ ವಾದಿಯರು ಮತ್ತು ಪ್ರತಿವಾದಿಯರಿಗೆ ಸೇರಿದ 7 ಮನೆಗಳು ಮಾತ್ರ ಇರುತ್ತವೆ ಎಂದರೆ ಸರಿಯಲ್ಲ. ಇರುವಕ್ಕಿ, ದಂಟಿನಕೊಪ್ಪ, ಸರಗುಂದ ಗ್ರಾಮಗಳಲ್ಲಿ ಒಕ್ಕಲು ಕಣ, ಆಸ್ಪತ್ರೆ, ಅಂಗನವಾಡಿ, ರಂಗ ಮಂದಿರ ಯಾವುದಕ್ಕೂ ಸಹ ಸ್ಥಳವನ್ನು ಕಾಯ್ದಿರಿಸಿರುವುದಿಲ್ಲ ಎಂದರೆ ಸರಿಯಲ್ಲ. ಇರುವಕ್ಕಿ, ದಂಟಿನಕೊಪ್ಪ, ಸರಗುಂದ ಗ್ರಾಮಗಳಲ್ಲಿ ಒಕ್ಕಲು ಕಣ, ಆಸ್ಪತ್ರೆ, ಅಂಗನವಾಡಿ, ರಂಗ ಮಂದಿರ ಇರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಇರುವಕ್ಕಿ, ದಂಟಿನಕೊಪ್ಪ, ಸರಗುಂದ ಗ್ರಾಮಗಳಲ್ಲಿ ನಾವು ಒಕ್ಕಲು ಕಣವನ್ನು ಮಾತ್ರ ಮಾಡಿಸಿರುತ್ತೇವೆ. ಆಸ್ಪತ್ರೆ, ರಂಗಮಂದಿರ, ಆಟದ ಮೈದಾನ, ಅಂಗನವಾಡಿ ಇವುಗಳು ಇರುವುದಿಲ್ಲ.

6. ಸರಗುಂದ ಗ್ರಾಮದಲ್ಲಿ ಶಾಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸರಗುಂದ ಗ್ರಾಮದ ಶಾಲೆಯಲ್ಲಿ ಈಗ ಎಷ್ಟು ಮಕ್ಕಳು ಇದ್ದಾರೆಂದು ನಾನು ನೋಡಿರುವುದಿಲ್ಲ, ಆಗ 15 ರಿಂದ 20

ಮಕ್ಕಳು ಇದ್ದರು. ಸರ್ವೇ ಸಂಖ್ಯೆ 10 ಪಂಚಾಯಿತಿಗೆ ಸೇರಿದ ಜಾಗವಲ್ಲ, ಕಂದಾಯ ಭೂಮಿ ಅಂದರೆ ಸರಿಯಲ್ಲ. ಸರ್ವೇ ಸಂಖ್ಯೆ 10 ಪಂಚಾಯಿತಿಗೆ ಮಂಜೂರಾಗಿರುತ್ತದೆ. ಪಂಚಾಯಿತಿಗೆ ಮಂಜೂರಾಗದ ಜಾಗದಲ್ಲಿ ನಾವು ಸ್ವತ್ತನ್ನು ಕಾಯ್ದಿರಿಸಲು ಅವಕಾಶ ಇಲ್ಲ ಎಂದರೆ ಸರಿ. 1 ರಿಂದ 8 ನೇ ವಾದಿಯರು ಒಂದೇ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಪಂಚಾಯಿತಿಯಲ್ಲಿ ಒಕ್ಕಲು ಕಣ, ಆಸ್ಪತ್ರೆ, ಆಟದ ಮೈದಾನ, ರಂಗಮಂದಿರ, ಅಂಗನವಾಡಿ ನಿರ್ಮಾಣಕ್ಕೆ ಯಾವುದೇ ಹಣವನ್ನು ನಾವು ಕಾಯ್ದಿರಿಸಿರುವುದಿಲ್ಲ.

7. ನಾವು ಒಕ್ಕಲು ಕಣ, ಆಸ್ಪತ್ರೆ, ಆಟದ ಮೈದಾನ, ರಂಗ ಮಂದಿರ, ಅಂಗನವಾಡಿಗೆ ಜಾಗವನ್ನು ನೋಡಿ ಶಿಫಾರಸ್ಸನ್ನು ಮಾಡಿದ ನಂತರ ಜಿಲ್ಲಾ ಪಂಚಾಯಿತಿಯ ಸದಸ್ಯರಾದ ಅನಗೋಡು ರತ್ನಾಕರ ರವರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದರು. ಜಿಲ್ಲಾ ಪಂಚಾಯಿತಿಯ ಸದಸ್ಯರು ಬಂದಿದ್ದಾರೆಂದು ವಾದಿಯರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆಟದ ಮೈದಾನ, ಒಕ್ಕಲು ಕಣ, ರಂಗ ಮಂದಿರ, ಅಂಗನವಾಡಿ, ಆಸ್ಪತ್ರೆಗಾಗಿ ನಾವು ಶಿಫಾರಸ್ಸು ಮಾಡಿದ ಜಾಗ ಪ್ರತಿವಾದಿಯರು ಬಗರ್ ಹುಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿರುವ ಜಾಗವೆಂದು ಪ್ರತಿವಾದಿಯರು ತಕರಾರು ಮಾಡಿದರು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಏನನ್ನು ಮಾಡಬಾರದೆಂದು ಸರ್ಕಾರಕ್ಕೆ ತಕಾರರನ್ನು ಕಳುಹಿಸಿದರು ಎಂದು ನಾನು ಹೇಳಿ ಬರೆಸಿರುವುದಿಲ್ಲ. ಈ ರೀತಿ ಯಾರು ಹೇಳಿ ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿದರು ಎಂದು ನನಗೆ ಗೊತ್ತಿಲ್ಲ. 8 ನೇ ವಾದಿಯೊಂದಿಗೆ ನಾನು ವಿಶ್ವಾಸವಾಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.